**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು**

**ಸಿ.ಸಿ ನಂ.1091/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಂಜುನಾಥ | ಸಿಡಬ್ಲ್ಯೂ-5 |
| ತಂದೆಯ ಹೆಸರು | - | ರಂಗದಾಸಪ್ಪ | ಪಿಡಬ್ಲ್ಯೂ-7 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ | - | ದಿಂಡಾವರ ಗ್ರಾಮ | |

**ದಿನಾಂಕಃ 21.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.1 ರಿಂದ 4 ರವರು ನನಗೆ ಗೊತ್ತು. ಚಾಸಾ.2 ರವರು 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಚಾಸಾ.6, 7 ರವರು ಗೊತ್ತು. ಆರೋಪಿತರು ಗೊತ್ತು. ನಾನು ಯಾವುದೇ ಗಲಾಟೆ ನೋಡಿಲ್ಲ, ಯಾವುದೇ ಜಗಳ ಬಿಡಿಸಿಲ್ಲ, ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಸಾಕ್ಷಿ ಮಹಜರ್ ನಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-2(ಸಿ} ಎಂದು ಗುರುತಿಸಲಾಯಿತು. 4 ವರ್ಷಗಳ ಹಿಂದೆ ನಿಪಿ-2 ಕ್ಕೆ ನಮ್ಮ ಊರಿನಲ್ಲಿ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ಮಹಜರ್ ನಲ್ಲಿ ಬರೆದ ವಿಚಾರ ಗೊತ್ತಿಲ್ಲ. ಪೊಲೀಸರು ಅದನ್ನು ಓದಿ ಹೇಳಿಲ್ಲ. ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ01.06.2020 ರಂದು ನಾನು ನಮ್ಮ ಮನೆಯ ಬಳಿ ಇದ್ದಾಗ ಸಾಯಂಕಾಲ 7 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಯ ಹತ್ತಿರ ಗಲಾಟೆಯಾಗುತ್ತಿದ್ದು ನಾನು ಹೋಗಿ

ನೋಡಿದೆ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ 1 ನೇ ಆರೋಪಿ ಏಕಾ ಏಕಿ ಬಂದು ಬೋಳಿಮಗನೇ ಸೂಳೆ ಮಗನೇ ಎಂದು ಬೈದಾಡಿದ್ದು ಚಾಸಾ.1 ರವರು ಏಕೆ ಬೈದಾಡುತ್ತೀಯ ಎಂದು ಕೇಳಿದ್ದಕ್ಕೆ 1 ನೇ ಆರೋಪಿ ಕೈಗಳಿಂದ ಅವರ ಕಪಾಳಕ್ಕೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ 2 ರಿಂದ 4 ನೇಆರೋಪಿತರು ಅಲ್ಲಿಗೆ ಬಂದು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು 2 ನೇ ಆರೋಪಿ ತನ್ನ ಕೈಯಲ್ಲಿದ್ದ ಕೋಲಿನಿಂದ ಚಾಸಾ.1 ರವರ ಬಲಕಣ್ಣಿಗೆ ಹೊಡೆದು ಅದೇ ಕೋಲಿನಿಂದ 4 ನೇ ಆರೋಪಿ ಚಾಸಾ.1 ರವರ ತಲೆಗೆ ಹೊಡೆದಿದ್ದು ಅಲ್ಲಿಯೇ ಬಿದ್ದಿದ್ದ ಇನ್ನೊಂದು ಕೋಲನ್ನು 3 ನೇ ಆರೋಪಿ ತೆಗೆದುಕೊಂಡ ಅವರ ಎಡಭುಜಕ್ಕೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಗಲಾಟೆ ಬಿಡಿಸಲು ಬಂದ ಚಾಸಾ.2 ರವರಿಗೆ 2 ನೇ ಆರೋಪಿ ಕೈಯಿಂದ ಕಪಾಳಕ್ಕೆ ಹೊಡೆದು ಕೆಳಕ್ಕೆ ತಳ್ಳಿ ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯಮಾಡಿದ್ದಾರೆ ಎಂದರೆ ಸರಿಯಲ್ಲ. ಆಗ ಚಾಸಾ.3, 4 ರವರು ಹೋಗಿ ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿತರು ಹೋಗುವಾಗ ನಿಮ್ಮನ್ನು ಸುಮ್ಮನೆ ಬಿಡವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ ಈ ಕುರಿತು ಚಾಸಾ.1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಹೇಳಿಕೆ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು.

ದಿಃ**02.06.2020** ರಂದು ನಾನು ತೋರಿಸಿದ ಜಾಗದಲ್ಲಿ ಸುಮಾರು **12** ರಿಂದ **12.40** ರ ಸಮಯದಲ್ಲಿ ಚಾಸಾ.**6** , **7** ರವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಕೋಲನ್ನು ವಶಪಡಿಸಿಕೊಂಡು ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರು ನಮ್ಮ ಊರಿನವರಾಗಿದ್ದರಿಂದ ಆರೋಪಿತರಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ ಹೆಚ್ ಎ ವಕೀಲರಿಂದ–ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು